ಇ) ಈ ರಸ್ತೆಗಳು ಹಾಗೂ ಸೇತುವೆಗಳು ಈಗಾಗಲೇ ಲೋಕೋಪಯೋಗಿ ಇಲಾಖೆಯಲ್ಲಿರುವುದು.

ಈ) ಪುತ್ತೂರು ಪರ್ಲಡ್ಕ ಬುಳ್ಳೇರಿಕಟ್ಟೆ ಉಕ್ಕಡ ಮಂಜೇಶ್ವರ ರಸ್ತೆ.

೨) ಕಾಪು ಈಶ್ವರ ಮಂಗಳ—ಆಡೂರು ರಸ್ತೆ.

೩) ಸೂಳ್ಯ—ಅಜ್ಜಾವರ ಮುಂಡೆಕೋಲು ರಸ್ತೆ.

ಜಿಲ್ಲಾಪರಿಷತ್‌ನ ವ್ಯಾಪ್ತಿಯಲ್ಲಿರುವ ಮೇಲ್ಕಂಡ ರಸ್ತೆಗಳಲ್ಲಿ ಸೇತುವೆಗಳನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ — ಮಾನ್ಯ ಅಧ್ಯಕ್ಷರೆ, "ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿರುವ ಮೇಲ್ಕಂಡ ರಸ್ತೆಗಳಲ್ಲಿ ಸೇತುವೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ" ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಈ ಪ್ರಸ್ತಾವನೆಯನ್ನು ತೀವ್ರಗತಿಯಲ್ಲಿ ಪರಿಶೀಲಿಸಿ ಸರಕಾರ ಜಿಲ್ಲಾಪರಿಷತ್ತಿನಿಂದ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆಯೇ ಎಂದು ಹೇಳಬೇಕು. ಜಿಲ್ಲಾಪರಿಷತ್ತು ಲೋಕೋಪಯೋಗಿ ಇಲಾಖೆ ಎಂದು ಈ ರಸ್ತೆಗಳ ಕಾರ್ಯವು ನಿಂತು ಹೋಗಿದೆ. ಈ ಬಗ್ಗೆ ವಿಚಾರವು ಕಳೆದ ಎರಡು ವರ್ಷಗಳಿಂದಲೂ ನಡೆಯುತ್ತಾ ಬಂದಿದೆ. ಜಿಲ್ಲಾಪರಿಷತ್ತಿನವರಿಗೆ ನಿಗದಿಪಡಿಸಿದ ಹಣದಿಂದ ಈ ಕಾರ್ಯವನ್ನು ಪೂರ್ತಿ ಮುಗಿಸುವುದು ಅಸಾಧ್ಯವಾಗಿದೆ. ಈ ಕಾಮಗಾರಿ ಕುರಿತು ಜಿಲ್ಲಾಪರಿಷತ್ತು ಕೈಬಿಟ್ಟರೆ ಸರಕಾರವು ಕೂಡ ತೆಗೆದುಕೊಳ್ಳುವುದಿಲ್ಲ ಎಂಬ ಒಂದು ಅಪನಂಬಿಕೆ ಕೂಡ ಇದೆ. ಆದುದರಿಂದ ಈ ಬಗ್ಗೆ ಸರ್ಕಾರವು ಕೂಡಲೇ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ ತೀವ್ರಗತಿಯಿಂದ ಏನಾದರೂ ಒಂದು ಪರಿಹಾರವನ್ನು ಸೂಚಿಸುತ್ತದೆಯೆ ಎಂದು ದಯಮಾಡಿ ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ — ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಸರ್ಕಾರ ತೆಗೆದುಕೊಂಡು ನಮ್ಮ ಇಲಾಖೆ ಪತಿಯಿಂದ ಸುಮಾರು ೭ ಸಾವಿರ ಕಿ.ಮೀ. ಅಷ್ಟು ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರಿಂದ ಬೇಡಿಕೆ ಬಂದಿತ್ತು. ಈಗಾಗಲೇ ಇದನ್ನು ಸಂಬಂಧಿಸಿದ ಜಿಲ್ಲಾಪರಿಷತ್ತಿನ ಅನುಮೋದನೆಗಾಗಿ ಕಳಿಸಿಕೊಟ್ಟಿದ್ದೇವೆ. ಅಲ್ಲಿಂದ ಅನುಮತಿ ಬಂದ ಮೇಲೆ ಈ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ದುರಸ್ತುಪಡಿಸುವ ಕಾರ್ಯವನ್ನು ಆದ್ಯತೆ ಮೇರೆಗೆ ಹಣಕಾಸಿನ ಸ್ಥಿತಿಗತಿ ಆರಿತು ಮಾಡುತ್ತೇವೆ. ಆದರೆ ಈ ಮೂರು ರಸ್ತೆಗಳ ಬಗ್ಗೆ ಜಿಲ್ಲಾ ಪರಿಷತ್ತುಗಳಿಂದ ನಮಗೆ ಪ್ರಸ್ತಾಪ ಬಂದಿದೆ. ಶೀಘ್ರದಲ್ಲೇ ಸರ್ಕಾರಿ ಹುಕುಂ ಮಾಡಿ ಕೆಲಸ ಬೇಗ ಮಾಡುವಂತೆ ಹೇಳುತ್ತೇನೆ.

ಶ್ರೀ ಕೆ. ಕುಶಾಲ.— ನಮ್ಮ ಜಿಲ್ಲಾಪರಿಷತ್‌ಗಳ ಇಂಜಿನಿಯರಿಂಗ್ ವಿಭಾಗದಲ್ಲಿ ನಾವು ಕೇಳಿದರೆ ಅವರು ಸರ್ಕಾರಕ್ಕೆ ವರದಿ ಮಾಡಿ ಕಳಿಸಿದ್ದೇವೆ ಎನ್ನುತ್ತಾರೆ. ಹಾಗಾದರೆ ನಾವು ಯಾವುದನ್ನು ನಂಬಬೇಕು. ಸರ್ಕಾರ ಇದನ್ನು ತೀವ್ರವಾಗಿ ಪರಿಶೀಲಿಸಿ ಮುಂದಿನ ಯೋಜನೆಯಲ್ಲಾದರೂ ಇದನ್ನು ಸೇರಿಸಿಕೊಂಡು ಅಭಿವೃದ್ಧಿಪಡಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಆದಷ್ಟು ಬೇಗ ಮಾಡಿಸುತ್ತೇನೆ.

ಚಿಂತಾಮಣಿ ತಾಲ್ಲೂಕಿನಲ್ಲಿನ ಕೆಲವು ರಸ್ತೆ ಮಾರ್ಗಗಳನ್ನು ಮೇಲ್ದರ್ಜೆಗೇರಿಸುವುದರ ಬಗ್ಗೆ

೨೬೯. ಶ್ರೀ ಚೌಡಾರೆಡ್ಡಿ. (ಚಿಂತಾಮಣಿ). —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಕೆಲವು ರಸ್ತೆ ಮಾರ್ಗಗಳನ್ನು ಮೇಲ್ದರ್ಜೆಗೆ ಏರಿಸುವಂತೆ ಹಿಂದಿನ ಲೋಕೋಪಯೋಗಿ ಇಲಾಖೆಯು ಮಂತ್ರಿಗಳು ಕಳುಹಿಸಿರುವ ಪ್ರಸ್ತಾವನೆಗಳು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ಪ್ರಸ್ತಾವನೆಯು ಎಂದಿನಿಂದ ಬಾಕಿ ಇದೆ.

ಇ) ಈ ಮಾರ್ಗಗಳನ್ನು ಮೇಲ್ದರ್ಜೆಗೆ ಏರಿಸಲು ಏನು ಕ್ರಮ ತೆಗೆದುಕೊಳ್ಳಲಾಗುತ್ತಿದೆ ?